**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 02.09.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸ.ಸ.ಅ ರವರಿಂದಃ**

ನಾನು ಆರೋಪಿತನನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿತನನ್ನು ನೋಡಿ ಆತನನ್ನು ಪಂಚನಾಮೆ ಕಾಲಕ್ಕೆ ನೋಡಿರುತ್ತೇನೆ ಎಂದು ನುಡಿಯುತ್ತಾರೆ.

**(ಈ ಸಂದರ್ಭದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ನಿ.ಪಿ-8 ದಾಖಲೆಯನ್ನು ಬೆಳಗೆಗ 10.00 ರಿಂದ 10.45 ರವರೆಗೆ ತಯಾರಿಸಿದ್ದು ಆ ಸಂದರ್ಭದಲ್ಲಿ ನಾನು ಸದರಿ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ನಿ.ಪಿ-6 ದಾಖಲೆಯನ್ನು ಬೆಳಗ್ಗೆ 11.40 ರಿಂದ ಮದ್ಯಾಹ್ನ 1.00 ಗಂಟೆಯವರೆಗೆ ತಯಾರಿಸಿದ್ದು ಆ ಸಂದರ್ಭದಲ್ಲಿ ನಾನು ಸದರಿ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ನಿ.ಪಿ-7 ದಾಖಲೆಯನ್ನು ಮದ್ಯಾಹ್ನ 2.00 ರಿಂದ 3.00 ಗಂಟೆಯವರೆಗೆ ತಯಾರಿಸಿದ್ದು ಆ ಸಂದರ್ಭದಲ್ಲಿ ನಾನು ಸದರಿ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಯು ಎಂ ಹೆಚ್ ವಕೀಲರಿಂದಃ**

ನಾನು ಪಂಚನಾಮೆಗೆ ಹೋದ ಸಂದರ್ಭದಲ್ಲಿ ಬೀರು ತೆರೆದಿತ್ತು. ಸದರಿ ಬೀರುವಿನ ಯಾವ ಜಾಗದಲ್ಲಿ ಒಡವೆ ಇಟ್ಟಿದ್ದರು ಎನ್ನುವ ಬಗ್ಗೆ ಪೋಲೀಸರು ಪಂಚನಾಮೆ ಮಾಡಿರುತ್ತಾರೆ. ಬೀರುವಿನ

ಯಾವ ಜಾಗದಲ್ಲಿ ಒಡವೆ ಇತ್ತು ಎನ್ನುವ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿರುತ್ತಾರೆ. ಘಟನಾ ಸ್ಥಳದ ಅಕ್ಕ ಪಕ್ಕ ಸಾಕಷ್ಟು ಮನೆಗಳಿವೆ ಎಂದರೆ ಸರಿ. ಸದರಿ ಮನೆ ಗ್ರಾಮದಲ್ಲಿರುವ ಕಾರಣ ಸದರಿ ಪ್ರದೇಶದಲ್ಲಿ ಜನ ಓಡಾಟ ಯಾವಾಗಲೂ ಇರುತ್ತದೆ ಎಂದರೆ ಸರಿ. ಯಾವುದೇ ವ್ಯಕ್ತಿ ಬೇರೆಯವರ ಮನೆಗೆ ಪ್ರವೇಶಿಸಿದರೆ ಅಕ್ಕ ಪಕ್ಕದ ಮನೆಯವರು ವಿಚಾರಣೆ ಮಾಡುತ್ತಾರೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಪೋಲೀಸರು ಅಕ್ಕ ಪಕ್ಕದ ಮನೆಯವರನ್ನು ವಿಚಾರಣೆ ಮಾಡಿರುತ್ತಾರೆ. ಆ ವಿಚಾರವನ್ನು ಪಂಚನಾಮೆಯಲ್ಲಿ ನಮೂದಿಸಿರುತ್ತಾರೆ. ಪೋಲೀಸರು ಸ್ಥಳ ಪಂಚನಾಮೆ ಮಾಡುವಾಗ ನಾನು ಸ್ಥಳದಲ್ಲಿ ಹಾಜರಿದ್ದು ಪೋಲೀಸರು ಬೀರುವಿನ ಯಾವ ಜಾಗದಲ್ಲಿ ಒಡವೆ ಇತ್ತು ಎನ್ನುವ ಬಗ್ಗೆ ಪಂಚನಾಮೆ ಮಾಡಿದ್ದು ಆ ಕಾಲಕ್ಕೆ ಅಕ್ಕ ಪಕ್ಕದ ಮನೆಯವರನ್ನು ವಿಚಾರಣೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೀರುವನ್ನು ಲಾಕ್ ಮಾಡಿರುವ ಬಗ್ಗೆ ಚಾ.ಸಾ–1 ರವರು ಪೋಲೀಸರಿಗೆ ಮಾಹಿತಿ ನೀಡಿರುತ್ತಾರೆ. ಸದರಿ ಬೀರುವಿನ ಕೀಯನ್ನು ಮನೆಯಲ್ಲಿ ಇಟ್ಟಿದ್ದರು ಎಂದು ಚಾ.ಸಾ–1 ರವರು ಪೋಲೀಸರಿಗೆ ತಿಳಿಸಿರುತ್ತಾರೆ. ಕೀ ಇಟ್ಟ ಸ್ಥಳವನ್ನು ಪಂಚನಾಮೆಯಲ್ಲಿ ನಮೂದಿಸಿರುತ್ತಾರೆ ಹಾಗೂ ನಕಾಶೆಯಲ್ಲಿ ಗುರುತಿಸಿರುತ್ತಾರೆ. ಕೀ ಇರುವ ಸ್ಥಳವನ್ನು ಗುರುತಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸ್ ಠಾಣೆಯಲ್ಲಿ ಸೃಷ್ಟಿ ಮಾಡಿದ ಪಂಚನಾಮೆಗೆ ಸಹಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ **23.10.2020** ರಂದು ಗ್ರಾಮಾಂತರ ವೃತ್ತ ಕಛೇರಿಯಲ್ಲಿ ಪಂಚನಾಮೆ ಮಾಡುವಾಗ ನಾನು, ಚಾ.ಸಾ–**4**, ಚಾ.ಸಾ–1 ರವರ ಕುಟುಂಬದವರು ಇದ್ದರು. ನನ್ನ ಸಮಕ್ಷಮ ಒಡವೆಗಳನ್ನು ತೂಕ ಮಾಡಿರುವುದಿಲ್ಲ. ಒಡವೆಗಳನ್ನು ಗುರುತಿಸುವಿಕೆಯ ಬಗ್ಗೆ ಅಕ್ಕಸಾಲಿಗರನ್ನು ಪೋಲೀಸರು ಕರೆಸಿರುವುದಿಲ್ಲ. ಒಡವೆಗಳನ್ನು ಚಾ.ಸಾ–1 ರವರು ಗುರುತಿಸಿರುತ್ತಾರೆ. ವಶಪಡಿಸಿಕೊಂಡಿರುವ ನೋಟಿನ ನಂಬರುಗಳನ್ನು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಗ್ರಾಮಾಂತರ ವೃತ್ತ ಕಛೇರಿಗೆ ಹೋಗಿದ್ದು ಅಲ್ಲಿ ಒಡವೆಗಳನ್ನು ತೋರಿಸಿ ಹಣ ಮತ್ತು

ಒಡವೆಗಳ ಬಗ್ಗೆ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪಂಚನಾಮೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಚಾ.ಸಾ-**1** ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರ ಮನೆಗೆ ಭಧ್ರಾವತಿ ಪೋಲೀಸ್ ಠಾಣೆಯಿಂದ ಹೋಗಿರುತ್ತೇನೆ ಸಮಯ ನೆನಪಿರುವುದಿಲ್ಲ. ಪೋಲೀಸರು ಸದರಿ ಮನೆ 1 ನೇ ಆರೋಪಿತನ ಮನೆ ಎಂದು ಮಾಹಿತಿ ನೀಡಿರುತ್ತಾರೆ. 1 ನೇ ಆರೋಪಿಗೆ ಸೇರಿದ ಮನೆ ಎನ್ನುವ ಬಗ್ಗೆ ದಾಖಲಾತಿ ಪಡೆದುಕೊಂಡಿಲ್ಲ. 1 ನೇ ಆರೋಪಿತನ ಮನೆ ಎನ್ನುವ ಬಗ್ಗೆ ಗ್ರಾಮ ಪಂಚಾಯ್ತಿ ಅಧಿಕಾರಿಗಳನ್ನು ಕರೆಸಿ ಖಚಿತಪಡಿಸಿಕೊಂಡಿಲ್ಲ. ಒಡವೆಗಳನ್ನು ಯಾವ ಜಾಗದಲ್ಲಿ ಇಟ್ಟಿದ್ದರು ಎನ್ನುವ ಬಗ್ಗೆ ಪಂಚನಾಮೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಒಡವೆಗಳ ಮೌಲ್ಯ ಮತ್ತು ತೂಕವನ್ನು ನಮೂದು ಮಾಡಿರುವುದಿಲ್ಲ. ಅಕ್ಕ ಪಕ್ಕದ ಮನೆಯವರನ್ನು ವಿಚಾರಣೆ ಮಾಡಿ ಸಾಕ್ಷಿಯಾಗಿ ಸಹಿ ಪಡೆದುಕೊಂಡಿರುವುದಿಲ್ಲ. 1 ನೇ ಆರೋಪಿತನ ಮನೆಗೆ ಕರೆದುಕೊಂಡು ಹೋಗಿ ಒಡವೆಗಳನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಸೃಷ್ಟಿಸಿದ ಪಂಚನಾಮೆಗೆ ಸಹಿ ಮಾಡಿದ್ದು ಪಂಚನಾಮೆ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಚಾ.ಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 23.10.2020 ರಂದು ಚಾ.ಸಾ-1 ರವರ ಮನೆಗೆ ಹೋದಾಗ ನನ್ನ ಜೊತೆ ಚಾ.ಸಾ-4 ರವರು ಇದ್ದರು. ಮೊದಲು 1 ನೇ ಆರೋಪಿತನ ಮನೆಗೆ ಹೋಗಿ ನಂತರ ಚಾ.ಸಾ-1 ರವರ ಮನೆಗೆ ಹೋಗಿರುತ್ತೇವೆ. 1 ನೇ ಆರೋಪಿತನ ಮನೆಯಿಂದ ಚಾ.ಸಾ-1 ರವರ ಮನೆಗೆ 35 ಕಿ ಮೀ ಅಂತರ ಇದೆ. ನಾವು ಆ ದಿನ ಚಾ.ಸಾ-1 ರವರ ಮನೆಗೆ ಚಾ.ಸಾ-**4** ರವರ ಕಾರಿನಲ್ಲಿ ಹೋಗಿರುತ್ತೇವೆ. 1 ನೇ ಆರೋಪಿತನ ಮನೆಯಿಂದ ಠಾಣೆಗೆ ಹೋಗಿ ನಂತರ ಚಾ.ಸಾ-1 ರವರ ಮನೆಗೆ ಹೋಗಿರುತ್ತೇವೆ. 1 ನೇ ಆರೋಪಿತನ ಮನೆಯಿಂದ ಪೋಲೀಸ್ ಠಾಣೆಗೆ 15 ಕಿ ಮೀ

ಅಂತರ ಇದೆ. 1 ನೇ ಆರೋಪಿತನ ಮನೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದು ನೆನಪಿಲ್ಲ. ಚಾ.ಸಾ-1 ರವರ ಮನೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ. ಚಾ.ಸಾ-1 ರವರ ಮನೆಗೆ ಹೋಗಿ ಪಂಚನಾಮೆ ಮಾಡುವಾಗ ನಾನು ಹಾಜರಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ತಪ್ಪು ಮಾಡದೇ ಇದ್ದರೂ ಚಾ.ಸಾ-1 ರವರು ಪರಿಚಯಸ್ಥರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೂ, ಪಂಚನಾಮೆಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ನಾಸಿರ ಬಾನು )
1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಭದ್ರಾವತಿ.